ಕಣ್ಣಲ್ಲಿ ನೀರು... ಗಲ್ಲಕ್ಕಿಳಿದು ಕೆಳಗೆ ತೊಟ್ಟಿಕ್ಕಿತು.

'ಸಲ್ಮಾ... ಸಾಹುಕಾರ್ರು ಹೇಳಿದ್ದಕ್ಕೆ...' ಅಬ್ದುಲ್ಲಾ ತೊದಲಿದ.

ಸಲ್ಮಾ ಅವನನ್ನು ದಿಟ್ಟಿಸಿ ನೋಡಿದಳು.

ಹೌದು ಅವರು ಹೇಳಿದ್ರು. ನೀನು ಒಪ್ಪಿದೆ. ನೀವೆಲ್ಲಾ ಕಟುಕರು. ನನ್ನನ್ನು ಪುನಹ ನರಕಕ್ಕೆ ತಳ್ತಾ ಇದ್ದೀರಿ.'

ರಪ್ಪನೆ ಬಿದ್ದ ಅನಿರೀಕ್ಷಿತ ಚಾಟಿಯೇಟು. ಅಬ್ದುಲ್ಲಾ ತತ್ತರಿಸಿದ.

ಸಲ್ಮಾ ಏನೂ ಬದಲಾಗಿಲ್ಲ. ಮುಂಚಿನಂತೆಯೇ ಇದ್ದಾಳೆ. ನೇರ ಚಾಟಿಯೇಟಿನಂತಹ ಮಾತು ಅವಳ ವಿಶೇಷ ಗುಣ. ಇದರಿಂದಾಗಿಯೇ ಅವಳೊಂದು ವಿವಾದಾತ್ಮಕ ವ್ಯಕ್ತಿ ಆದದ್ದು. ಇವಳನ್ನು ನಾನು ಈಗ ನೋಡುವುದಾ... ಸಣ್ಣಂದಿನಲ್ಲಿ ಕೂಡಾ ಇವಳ ಬುದ್ಧಿ ಹೀಗೆಯೇ. ತಾಯಿ ಇಲ್ಲದ ಮಗು ಎಂದು ಸಾಹುಕಾರರು ಕೊಂಡಾಟದಲ್ಲಿ ಸಾಕಿದ್ದರ ಫಲ– ಎಂದುಕೊಂಡ.

**ಸಲ್ಮಾ ಸ್ವಲ್ಪ ದೂರದಲ್ಲಿ ಮಂಚದ ಮೇಲೆ ಕುಳಿತಳು. ಅವನನ್ನು ನೋಡುತ್ತಾ ಹೇಳಿದಳು,**

**'ಇಂದು ನೀನು ನನ್ನ ಗಂಡ. ನಾನು ನಿನ್ನ ಹೆಂಡತಿ. ನೀನು ಕೂಡ ಪಕ್ಕಾ ಗಂಡಸು ತಾನೇ. ಅಪ್ಪಣೆ ಮಾಡು ಈ ನಿಕೃಷ್ಟ ದಾಸಿ ಏನು ಮಾಡಬೇಕಂತ...'**

**ಅಬ್ದುಲ್ಲಾ ಈಗ ನಿಷ್ಠುರನಾದ, ಗಡುಸಾದ.**

ಒಂದು ರೀತಿಯಲ್ಲಿ ನೋಡಿದರೆ ಅಬ್ದುಲ್ಲಾ ಸಾಹುಕಾರರ ಜತೆ ಸೇರಿದ್ದು ಸಲ್ಮಾನಿಂದಾಗಿಯೇ. ಅವಳು ಶಾಲೆಗೆ ಹೋಗುವಾಗ ಅವಳ ಜತೆ ಹೋಗಲು ಯಾರಾದರೂ ಬೇಕಲ್ಲ. ಅದಕ್ಕೆಂದೇ ಖಾನ್ ಸಾಹೇಬರು ಅಬ್ದುಲ್ಲಾನನ್ನು ಗೊತ್ತು ಮಾಡಿದ್ದರು. ಅವನ ಶಾಲೆಯ ಖರ್ಚನ್ನೆಲ್ಲಾ ಅವರೇ ನೋಡಿಕೊಳ್ಳುತ್ತಿದ್ದರು. ಅಬ್ದುಲ್ಲಾನ ಕೆಲಸವಿಷ್ಟೆ. ಬೆಳಿಗ್ಗೆ ಬೇಗ ಅರಬೀ ಶಾಲೆಗೆ ಅವಳನ್ನು ಕರೆದುಕೊಂಡು ಹೋಗುವುದು, ಅನಂತರ ಕನ್ನಡ ಶಾಲೆಗೆ, ಸಂಜೆ ಮನೆಗೆ ಕರೆದುಕೊಂಡು ಬರುವುದು. ಮತ್ತೆ ಮನೆಯದ್ದು ಸಣ್ಣಪುಟ್ಟ ಕೆಲಸ. ಕೆಲವೇ ಸಮಯದಲ್ಲಿ ಅಬ್ದುಲ್ಲಾ ಅವರ ಮನೆಯವನೇ ಆಗಿಬಿಟ್ಟ. ಆದರೆ ರಾತ್ರಿ ಮಾತ್ರ ತನ್ನ ಗುಡಿಸಲಿಗೆ ಹೋಗುತ್ತಿದ್ದ.

ಪುಟ್ಟ ಸಲ್ಮಾಳನ್ನು ಅಬ್ದುಲ್ಲಾನೇ ಶಾಲೆಗೆ ಕರೆದುಕೊಂಡು ಹೋಗಬೇಕು. ಬೇರೆ ಯಾರು ಕರೆದುಕೊಂಡು ಹೋದರೂ ಆಗದು. ಮನೆಯಲ್ಲಿನ ಎಲ್ಲಾ ವಿಷಯವನ್ನೂ ಅವನೊಡನೆ ಹೇಳಬೇಕು. ಇದೇ ಅಭ್ಯಾಸ ಬೆಳೆದು ದೊಡ್ಡವಳಾದಾಗ ಯಾವುದಾದರೊಂದು ವಿಷಯವನ್ನು ಹಿಡಿದುಕೊಂಡು ಅವನೊಡನೆ ವಾದಕ್ಕೆ ಇಳಿಯುತ್ತಿದ್ದಳು.

ಎಸ್ಸೆಸ್ಸೆಲ್ಸಿ ಆದನಂತರ ಸಲ್ಮಾಳನ್ನು ಖಾನ್ ಸಾಹೇಬರು ಕಾಲೇಜಿಗೆ ಕಳುಹಿಸಲಿಲ್ಲ. ಜತೆಗೆ ಹೊರಗೆ ಅಡ್ಡಾಡುವುದಕ್ಕೆ, ಅಬ್ದುಲ್ಲಾನೊಡನೆ ಹೆಚ್ಚು ಸಲಿಗೆ ಬೆಳೆಯುವುದಕ್ಕೂ ಆಸ್ಪದ ಕೊಡಲಿಲ್ಲ. ಅವಳೀಗ ಒಳಗೊಳಗೇ ಕುದಿಯುತ್ತಿದ್ದಳು. ತನ್ನನ್ನು ಓರಗೆಯ ಹಿಂದೂ ಕ್ರಿಶ್ಚಿಯನ್ ಹುಡುಗಿಯರೊಡನೆ ತೂಗಿ ನೋಡುತ್ತಿದ್ದಳು. ಅವರು ಸಿಂಗರಿಸಿಕೊಂಡು ಅತ್ತಿತ್ತ